ಓ.ಎಸ್.ನಂ63/2019
ಪಿ.ಡಬ್ಲ್ಯೂ-02

<u>ಸಾಕ್ಷಿಯನ್ನು ದಿಃ **08.04.2025** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀಮತಿ. ಜಿ.ಆರ್ ಕೆ. ವಕೀಲರಿಂದ.</u>

ಈ ದಿನ ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನಿ.ಪಿ 1 ದಾಖಲೆಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಸದರಿ ದಾಖಲೆಯಲ್ಲಿ ರಾಜು ಎನ್ನುವವರು ಸಹ ಸಹಿ ಮಾಡಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿ.ಪಿ 1 (ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ವಾದಿಗಳಿಗೆ ಪ್ರತಿವಾದಿಗಳು ಬರೆದುಕೊಟ್ಟಿರುತ್ತಾರೆ ಮತ್ತು ತಮ್ಮ ಸಹಿಗಳನ್ನು ನಿ.ಪಿ 1 ರ ಎಲ್ಲಾ ಪುಟಗಳಿಗೆ ಮಾಡಿರುತ್ತಾರೆ. ದಾಖಲೆಯನ್ನು ಅನಂತರಾಮು ಎನ್ನುವವರು ಬರೆದಿರುತ್ತಾರೆ.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೊಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.